ಕಡೂರು ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಜಮೀನಿನ ವಿಸ್ತೀರ್ಣ.

೨೦೪೫. ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಡೂರು ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣ ಎಷ್ಟು ?

ಆ) ಇದನ್ನು ಸಾಗುವಳಿದಾರರಿಗೆ ಖಾಯಂ ಮಾಡಲು ಜಪ್ತು ಕಾಲಾವಕಾಶ ಬೇಕಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ದಿನಾಂಕ ೧-೧-೧೯೮೮ರವರೆಗೆ ೧೨,೮೮೩-೨೩ (ಹನ್ನೆರಡು ಸಾವಿರದ ಎಂಟು ನೂರು ಎಂಬತ್ತೂರು ಎಕರೆ ಇಪ್ಪತ್ತೂರು ಗುಂಟೆ) ವಿಸ್ತೀರ್ಣದಲ್ಲಿ ಬಗರ್ ಹುಕುಂ ಸಾಗುವಳಿಯಾಗಿರುತ್ತದೆ.

ಆ) ಬಗರ್ ಹುಕುಂ ಸಾಗುವಳಿಗಳನ್ನು ಭೂ ಕಂದಾಯ ಕಾಯಿದೆಗೆ ತಂದಿರುವ ಕರಡಿ ಮಸೂದೆ ಪಾಸಾದ ನಂತರ ಆ ಪ್ರಕಾರ ಅರ್ಹತೆ ಹೊಂದಿದ ಎಲ್ಲಾ ಪ್ರಕರಣಗಳನ್ನು ಕ್ರಮಬದ್ಧ ಗೊಳಿಸಲು ಕ್ರಮ ಜರುಗಿಸಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಭೂರಹಿತರ ಸಂಖ್ಯೆ.

೧೯೮೪. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಮಾಡಲಾದ ಭೂರಹಿತರ ಸಂಖ್ಯೆ ಎಷ್ಟು ? ಹಾಗೂ ಸಾಗುವಳಿ ಮಾಡಿರುವ ಭೂಮಿ ಎಷ್ಟು ?

ಆ) ಬಗರ್‌ಹುಕ್ಕುಂ ಭೂಮಿಯ ಬಗ್ಗೆ ತೀರ್ಮಾನ ಕೊಡಲು ಸರ್ಕಾರದವರು ರಚಿಸಿದ ಸಮಿತಿಗಳಾವುವು ?

(ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹೆಸರು ಮತ್ತು ವಿಳಾಸಗಳ ವಿವರ ನೀಡುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಬಗರ್‌ಹುಕ್ಕುಂ ಮಾಡಲಾದ ಭೂರಹಿತರ ಸಂಖ್ಯೆ ೬೯೦೯ ಮತ್ತು ವಿಸ್ತೀರ್ಣ ೧೨.೦೬೦ ಎಕರೆ ೩೭ ಗುಂಟೆ

ಆ) ಯಾವುದೂ ಇಲ್ಲಾ

ರಾಜ್ಯದ ಮುಜರಾಯಿ ಇಲಾಖೆಯಲ್ಲಿನ ದಿನಗೂಲಿ ನೌಕರರ ಬಗ್ಗೆ.

೧೯೧೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖನಿಜ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಮುಜರಾಯಿ ಇಲಾಖೆಯಲ್ಲಿರುವ ದಿನಗೂಲಿ ನೌಕರರ ಸಂಖ್ಯೆಯೆಷ್ಟು ?

ಆ) ಆ ನೌಕರರು ಕೆಲಸ ಮಾಡುತ್ತಿರುವ ಸ್ಥಳ ಹಾಗೂ ಪಡೆಯುತ್ತಿರುವ ವೇತನವೆಷ್ಟು ?

ಇ) ಸದರಿ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?